ವಿಳಾಸ ಯಾರಿಗೂ ಗೊತ್ತಿಲ್ಲ. ಥಾಕ್ರೀ ಇಲ್ಲ ಎಂದರೆ ಅಜ್ಜ ಪರಿತಪಿಸಿ ಸಾಯುತ್ತಾನೆ. ಮತ್ತೆ ಓಡಿ ಹೋಗಿದ್ದಾಳೆ ಎಂಬುದನ್ನು ಕೇಳಿದರೆ ಅವಳದ್ದೆ ಚಿಂತೆಯಲ್ಲಿ ಹಾಸಿಗೆ ಹಿಡಿದಿರುವ ಅಜ್ಜ ಒಪ್ಪಿಕೊಳಲು ಆಗದೆ ಒದ್ದಾಡಬಹುದು. ಸತ್ತು ಹೋಗಿದ್ದಾಳೆ ಎಂದು ನನಗೆ ಹೇಳಲಾಗದು. ನಾನು ಏನಾದರೂ ಮಾಡಲೇಬೇಕಿತ್ತು.

ಡೋಂಗ್ರಿ ಸಹಾಯ ಮಾಡಿದ. ಥಾಕ್ರೀಯ ವಿರಹ ಸಾಗ ಹಾಕಲು ಅವನು ಇನ್ನೊಬ್ಬಳಲ್ಲಿ ಥಾಕ್ರೀಯನ್ನು ಕಂಡುಕೊಂಡಿದ್ದ. ಆ ಊರಿಗೆ ಕರೆದುಕೊಂಡು ಹೋದ. ಅವಳೊಬ್ಬ ವಿಧವೆ. ಥಾಕ್ರೀಯ ಹಾಗೆ ಇದ್ದಳು.



ಅಂತದ್ದೆ ಮೈಮಾಟ... ಅಂತದ್ದೆ ನಡೆ ನುಡಿ. ಅಜ್ಜನಿಗೆ ಕಣ್ಣು ಕಿವಿ ಅಷ್ಟಕಷ್ಟೇ. ಇವಳನ್ನೆ ಥಾಕ್ರೀ ಎಂದು ನಂಬಿಸಿದರಾಯಿತು ಅಂದುಕೊಂಡೆ.

'ಪುಣ್ಯದ ಕಾರ್ಯ ಹೋಗು ಒಲ್ಲೆ ಅನಬ್ಯಾಡ ಪುಣ್ಯ ಬರತೈತೆ...' ಎಂದು ಡೋಂಗ್ರಿ ಊರಿಗೆ ಹೋಗಿ ಬರುವಂತೆ ಅವಳನ್ನು ಒಪ್ಪಿಸಿದ. ಅವನ ಕೈಯಲ್ಲಿ ನೋಟಿನ ಕಂತೆ ಇಟ್ಟೆ. ಅವನು ನಿರಾಕರಿಸುತ್ತ ಸಾವ್ಕಾರ್... ಎಂದ. ಅದು ಹಂಗಿಸಿದ ಹಾಗೆ ಕೇಳಿಸಿತು.

ಊರಿಗೆ ಬಂದು ತಲುಪುವವರೆಗೂ... ಡೋಂಗ್ರಿಯ ಮಾತುಗಳು ಮುರಿದ ಮುಳ್ಳಿನಂತೆ ಅಲುಕುತ್ತಲೆ ಇದ್ದವು. ಮನೆ ತಲುಪುತ್ತಿದ್ದಂತೆ ಮನೆಯ ಎಲ್ಲರಿಗೂ ವಿಷಯ ಏನೆಂಬುದನ್ನು ತಿಳಿಸಿದೆ. ಅವರ ಪ್ರತಿಕ್ರಿಯೆ ಕಂಡು ಅವರಿಗೆ ಮೊದಲೆ ಥಾಕ್ರೀ ಮತ್ತು ಅಜ್ಜನ ಸಂಗತಿ ಗೊತ್ತಿರುವುದು ಅರ್ಥವಾಯಿತು.

ನಾವು ಇಬ್ಬರೆ ಅಜ್ಜನ ಕೋಣೆ ಪ್ರವೇಶಿಸಿ ಕದ ಮುಚ್ಚಿದೆ. ಅಜ್ಜ ಎಚ್ಚರವಿದ್ದ. ತುಟಿಗಳು ಯಾರು... ಅಂದವು. ನಾನು ಹೋಗಿ ಕೈ ಮುಟ್ಟಿ ತಟ್ಟಿ ಮಾತನಾಡಿಸಿದೆ. ಅಜ್ಜನ ಮುಖ ಅರಳಿತು. ಥಾಕ್ರೀ... ಎಂದಿತು ಗಂಟಲು. ನಾನು ಕರೆತಂದಿದ್ದ ಹೆಂಗಸನ್ನು ನೋಡಿ ಈ ಮೊದಲು ಹೇಳಿದಂತೆ ಮಾಡಲು ಸನ್ನೆ ಮಾಡಿ. ಅಜ್ಜನ ಕಿವಿಯಲ್ಲಿ ಬಾಯಿಟ್ಟು,'ಬಂದಿದ್ದಾಳೆ ಇಲ್ಲೆ ನಿಂತಿದ್ದಾಳೆ... ನಾನು ಹೊರಗೆ ಹೋಗುತ್ತೇನೆ...' ಎಂದು ಕೂಗಿ ಹೇಳಿ ಕದ ಮುಂದೆ ಮಾಡಿಕೊಂಡು ಹೊರಗೆ ಬಂದೆ.

ಸ್ವಲ್ಪ ಸಮಯ ಕಳೆದಿತ್ತು ಅಷ್ಟೇ. ಆ ಹೆಂಗಸು ಕದ ತೆರೆದು ಬಂದಳು. ಅವಳ ಕೈಯಲ್ಲಿ ನೋಟುಗಳಿದ್ದವು. ಅಜ್ಜ ಕೊಟ್ಟು ನಿರಾಳನಾದನೆ... ಓಡಿ ಹೋಗಿ ನೋಡಿದೆ. ಅಜ್ಜ ಕಣ್ಮುಚ್ಚಿದ್ದ. ಅವನ ಮುಖದಲ್ಲಿ ನಿರಾಳತೆಯನ್ನಾಗಲೀ, ಕೊಡದೆ ಹೋದ ಪಶ್ಚಾತಾಪವನ್ನಾಗಲೀ ನನಗೆ ಗುರುತಿಸಲು ಆಗಲಿಲ್ಲ. ಆದರೆ ಕಣ್ಣಂಚಿನಲ್ಲಿ ನೀರಾಡಿದ ಗುರುತು ಕಂಡಿತು. ಅಜ್ಜ ತೀರಿ ಹೋಗಿದ್ದ. ಸುದ್ದಿ ತಿಳಿಯುತ್ತಲೆ ಎಲ್ಲರೂ ಕೋಣೆ ಸೇರಿಕೊಂಡು ಅಳತೊಡಗಿದರು.

ನಾನು ಆ ಹೆಂಗಸನ್ನು ಬದಿಗೆ ಕರೆದು ಕೇಳಿದೆ. ಅಜ್ಜ ಕ್ಷಮೆ ಕೇಳುತ್ತ ಅವಳ ಕೈಗೆ ದುಡ್ಡು ಇಡುತ್ತ ಬೆರಳು ತಡಕಾಡಿವೆ. ಬೆರಳುಗಳ ಹುಡುಕಾಟ ಯಾರಿಗೆ ಅರ್ಥವಾಗುತ್ತದೆ. ಕೆಲವು ಕ್ಷಣ ಬೆರಳು ನಡುಗುತ್ತ ತಡಕಾಡಿವೆ. ಥಾಕ್ರೀಯ ಸ್ಪರ್ಶ ಬಿಸಿ ಬೆವರಿನ ಪರಿಚಯ ಅಲ್ಲಿಲ್ಲ. ಕಣ್ಣು ಬಿರಡೆಗಳನ್ನು ಬಿರಬಿರ ಹೊರಳಾಡಿಸಿದ ಅಜ್ಜ ಅವಳ ಕೈಯನ್ನು ದೂರ ತಳ್ಳಿದ್ದಾನೆ. ಮುಖ ಕಿವುಚಿಕೊಳ್ಳುತ್ತ ಕಣ್ಣು ಮುಚ್ಚಿದ್ದ.

ಮೊಮ್ಮಗನ ಇದಿರು ಸಣ್ಣವನಾದ... ಥಾಕ್ರೀಯ ದೃಷ್ಟಿಯಲ್ಲಿ ನೀಚನಾದ. ಅಜ್ಜನ ಕೊನೆಗಾಲದ ಪರಿತಪಿಸುವಿಕೆಯನ್ನು ಊಹಿಸಿಕೊಳ್ಳುತ್ತ ನಾನು ಪರಿತಪಿಸುತ್ತ ಕುಸಿಯತೊಡಗಿದೆ. ●